CCE-II-RR/PR/PF/NSR/NSPR(A)/888/4026

**A**

**ಜೂನ್ 2024 ರ ಪರೀಕ್ಷೆ - 2**

**JUNE 2024 EXAMINATION - 2**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**ಸಂಕೇತ ಸಂಖ್ಯೆ : 95-K**
**Code No. : 95-K**

**CCE RR/PR/PF/ NSR/NSPR FULL SYLLABUS**

Question Paper Serial No.

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / Private Fresh / NSR / NSPR)**

ದಿನಾಂಕ : 18. 06. 2024 ] [ Date : 18. 06. 2024

ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**18. 06. 2024**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಸಿಖ್ ಧರ್ಮವನ್ನು ಸ್ಥಾಪಿಸಿದವರು

(A) ಮಹಾವೀರ

(B) ಬುದ್ಧ

(C) ಗುರುನಾನಕ

(D) ಕಬೀರ್

2. ರಾಜಾ ರಾಮ್‌ಮೋಹನ್ ರಾಯರು ಬ್ರೋಹನ್ ಮಹಾಶಯನಿಗೆ ಸಹಾಯಹಸ್ತ ನೀಡಿರುವುದು

(A) ಸತಿ ಪದ್ಧತಿಯ ನಿರ್ಮೂಲನೆಗಾಗಿ

(B) ಗುಲಾಮಗಿರಿಯ ನಿರ್ಮೂಲನೆಗಾಗಿ

(C) ಜೀತ ಪದ್ಧತಿಯ ನಿರ್ಮೂಲನೆಗಾಗಿ

(D) ಬಾಲ್ಯವಿವಾಹದ ನಿರ್ಮೂಲನೆಗಾಗಿ

3. ಚಂಪಾರಣ್ಯ ಸತ್ಯಾಗ್ರಹದ ನೇತೃತ್ವ ವಹಿಸಿದವರು

(A) ಗಾಂಧೀಜಿ

(B) ಸರ್ದಾರ್ ಪಟೇಲ್

(C) ಜವಾಹರಲಾಲ್ ನೆಹರು

(D) ಬಾಲಗಂಗಾಧರ ತಿಲಕ್

4. ಹೋಂ ರೂಲ್ ಚಳವಳಿಯನ್ನು ಪ್ರಾರಂಭಿಸಿದವರು

(A) ಸರೋಜಿನಿ ನಾಯ್ಡು

(B) ದುರ್ಗಾ ಬಾಯಿ

(C) ಮಣಿಬೆನ್ ಪಟೇಲ್

(D) ಆ್ಯನಿ ಬೆಸೆಂಟ್

5. ಬ್ರಿಟಿಷರ ವಿರುದ್ಧ ಸಶಸ್ತ್ರ ಹೋರಾಟ ನಡೆಸಿದ ಝಾನ್ಸಿಯ ರಾಣಿ

(A) ಅಬ್ಬಕ್ಕ

(B) ಲಕ್ಷ್ಮೀ ಬಾಯಿ

(C) ಚೆನ್ನಮ್ಮ

(D) ಮಲ್ಲಮ್ಮ

6. ಹೋಂ ರೂಲ್ ಚಳವಳಿಯು ಮೊದಲಿಗಿಂತ ಹತ್ತರಷ್ಟು ಬಲಶಾಲಿಯಾಗಿದ್ದು

(A) ಗಾಂಧೀಜಿ ಭಾಗಿಯಾಗಿದ್ದರಿಂದ

(B) ಕಾಂಗ್ರೆಸ್ ಭಾಗಿಯಾಗಿದ್ದರಿಂದ

(C) ಮಹಿಳೆಯರು ಭಾಗಿಯಾಗಿದ್ದರಿಂದ

(D) ಐ.ಎನ್.ಎ. ಭಾಗಿಯಾಗಿದ್ದರಿಂದ

7. ಗಾಂಧೀಜಿಯವರು ಭಾರತದ ಬುಡಕಟ್ಟು ಜನರನ್ನು ಹೀಗೆಂದು ಕರೆದಿದ್ದಾರೆ

(A) ಗಿರಿಜನರು

(B) ಹರಿಜನರು

(C) ಆದಿವಾಸಿಗಳು

(D) ಬಹುಜನರು

8. 1917 ರಲ್ಲಿ ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತದಿಂದ ಪ್ರಭಾವಿತರಾದವರು

(A) ಇಂಗ್ಲೆಂಡ್‌ನ ಜನತೆ

(B) ರಷ್ಯಾದ ಜನತೆ

(C) ಫ್ರಾನ್ಸ್‌ನ ಜನತೆ

(D) ಜರ್ಮನಿಯ ಜನತೆ

9. ಹೆಣ್ಣು ಶಿಶುವಿನ ಭ್ರೂಣ ಹತ್ಯೆಯು

(A) ಆರ್ಥಿಕ ಸಮಾನತೆಗೆ ಕಾರಣವಾಗಿದೆ

(B) ಆರ್ಥಿಕ ಅಸಮಾನತೆಗೆ ಕಾರಣವಾಗಿದೆ

(C) ಲಿಂಗ ಸಮಾನತೆಗೆ ಕಾರಣವಾಗಿದೆ

(D) ಲಿಂಗ ಅಸಮಾನತೆಗೆ ಕಾರಣವಾಗಿದೆ

10. ನಾಗಾ ಬುಡಕಟ್ಟು ಜನಾಂಗ ಕಂಡುಬರುವುದು

(A) ಭಾರತದ ವಾಯುವ್ಯ ಭಾಗದಲ್ಲಿ

(B) ಭಾರತದ ಆಗ್ನೆಯ ಭಾಗದಲ್ಲಿ

(C) ಭಾರತದ ಈಶಾನ್ಯ ಭಾಗದಲ್ಲಿ

(D) ಭಾರತದ ನೈರುತ್ಯ ಭಾಗದಲ್ಲಿ

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

**5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) ಸತ್ಯಶೋಧಕ ಸಮಾಜ | (i) ಸ್ವಾಮಿ ವಿವೇಕಾನಂದ |
| (B) ಆರ್ಯ ಸಮಾಜ | (ii) ಜ್ಯೋತಿರಾವ್ ಫುಲೆ |
| (C) ರಾಮಕೃಷ್ಣ ಮಿಷನ್ | (iii) ದಯಾನಂದ ಸರಸ್ವತಿ |
| (D) ಬ್ರಹ್ಮ ಸಮಾಜ | (iv) ನಾಲ್ವಡಿ ಕೃಷ್ಣರಾಜ ಒಡೆಯರ್ |
| (E) ಬ್ರಾಹ್ಮಣೇತರರಿಗೆ ಮೀಸಲಾತಿ | (v) ರಾಜಾ ರಾಮ್‌ಮೋಹನ್ ರಾಯ್ |
| | (vi) ಆತ್ಮರಾಮ ಪಾಂಡುರಂಗ |
| | (vii) ಮಹಾತ್ಮಾ ಗಾಂಧಿ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪದ / ವಾಕ್ಯದಲ್ಲಿ ಉತ್ತರ ಬರೆಯಿರಿ : 15 × 1 = 15**

12. ಸಾಮಾಜಿಕ ಬದಲಾವಣೆ ಎಂದರೇನು ?

13. ಭಾರತದ ನವೋದಯ ಪಿತಾಮಹ ಎಂದು ಯಾರನ್ನು ಗುರುತಿಸಲಾಗಿದೆ ?

14. ಬಾರ್ಡೋಲಿ ಸತ್ಯಾಗ್ರಹದ ನೇತೃತ್ವ ವಹಿಸಿದವರು ಯಾರು ?

15. ಭಾರತದ ಮೊದಲ ಶಿಕ್ಷಕಿಯನ್ನು ಹೆಸರಿಸಿ.

16. ಬುಡಕಟ್ಟು ಎಂದರೇನು ?

17. ಭಾರತದ ಯಾವ ನಗರವನ್ನು ಸಿಲಿಕಾನ್ ವ್ಯಾಲಿ ಎಂದು ಕರೆಯುತ್ತಾರೆ ?

18. ಕೇಸರಿ ಎಂಬ ಪತ್ರಿಕೆಯನ್ನು ಪ್ರಾರಂಭ ಮಾಡಿದವರು ಯಾರು ?

19. ಕೈಗಾರಿಕೀಕರಣ ಎಂದರೇನು ?

20. 1950 ರ ಆರ್ಥಿಕ ಯೋಜನಾ ನೀತಿಯ ಮುಖ್ಯ ಗುರಿ ಏನು ?

21. 1917 ರ ರಷ್ಯಾ ಕ್ರಾಂತಿಯ ಸಮಯದಲ್ಲಿ ಆಳುತ್ತಿದ್ದ ರಾಜಮನೆತನವನ್ನು ಹೆಸರಿಸಿ.

22. ಎಸ್.ಎನ್.ಡಿ.ಟಿ. ವಿಶ್ವವಿದ್ಯಾಲಯವನ್ನು ಏಕೆ ಸ್ಥಾಪಿಸಲಾಯಿತು ?

23. ನಮ್ಮ ಸಂವಿಧಾನದ ಕಲಂ 244 ರ ಪ್ರಾಮುಖ್ಯತೆ ಏನು ?

24. ಭಾರತದ ಸಂವಿಧಾನಕ್ಕೆ 94 ನೇ ತಿದ್ದುಪಡಿ ತಂದ ಕಾರಣವೇನು ?

25. 19 ನೇ ಶಮಾನದಲ್ಲಿ ಬ್ರಿಟಿಷ್ ಸರ್ಕಾರವು ಗೆಜೆಟರ್‌ಗಳನ್ನು ಏಕೆ ಪ್ರಕಟಿಸಿತು ?

26. "ವೇದಗಳಿಗೆ ಹಿಂತಿರುಗಿ" ಎಂದು ಕರೆ ನೀಡಿದವರು ಯಾರು ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**14 × 2 = 28**

27. ಕೈಗಾರಿಕೀಕರಣದ ಪರಿಣಾಮಗಳು ಯಾವುವು ?

28. ಸಾಮಾಜಿಕ ಬದಲಾವಣೆ ವಿಳಂಬವಾಗುವಲ್ಲಿ ಸಾಂಪ್ರದಾಯಿಕ ಮನಃಸ್ಥಿತಿಯ ಪಾತ್ರವೇನು ?

29. ಸಾಮಾಜಿಕ ಚಳವಳಿಯ ಉದ್ದೇಶಗಳನ್ನು ತಿಳಿಸಿ.

30. ಭಾರತ ಸರ್ಕಾರವು ಬುಡಕಟ್ಟುಗಳ ಅಭಿವೃದ್ಧಿಗೆ ರೂಪಿಸಿದ ಮೂರು ನೀತಿಗಳನ್ನು ಹೆಸರಿಸಿ.

31. 1975 ರಲ್ಲಿ ಪ್ರಾಯೋಗಿಕವಾಗಿ ದೂರದರ್ಶನವನ್ನು ಯಾವ ನಗರಗಳಲ್ಲಿ ಪರಿಚಯಿಸಲಾಯಿತು ?

32. ಶಿಕ್ಷಣವು ರಾಜಕೀಯ ಪ್ರಜ್ಞೆಯನ್ನು ಮೂಡಿಸುತ್ತದೆ. ಹೇಗೆ ?

33. 1954 ರ ವಿಶೇಷ ವಿವಾಹ ಕಾಯ್ದೆಯನ್ನು ಏಕೆ ಜಾರಿಗೆ ತರಲಾಗಿದೆ ?

34. ಬ್ರಿಟಿಷ್ ಸರ್ಕಾರವು ಹೇಗೆ ಮಹಿಳಾ ಶಿಕ್ಷಣಕ್ಕೆ ಬೆಂಬಲ ನೀಡಿತು ?

35. ಅನಕ್ಷರತೆಯಿಂದಾಗಿ ಸಾಮಾಜಿಕ ಬದಲಾವಣೆ ಮಂದಗತಿಯಲ್ಲಿ ಸಾಗುತ್ತದೆ. ಸ್ಪಷ್ಟೀಕರಿಸಿ.

36. ದಿಲೀಪ್ ಸಿಂಗ್ ಬೂರಿಯಾರವರ ಆಯೋಗದ ಸಲಹೆಗಳೇನು ?

37. ಆಧುನೀಕರಣವು ಹೇಗೆ ಸಾಮಾಜಿಕ ಬದಲಾವಣೆಯನ್ನು ಉಂಟು ಮಾಡುತ್ತದೆ ?

38. ಸಾಮಾಜಿಕ ಬದಲಾಣೆಯಲ್ಲಿ ಕಬೀರರ ಪಾತ್ರವನ್ನು ವಿವರಿಸಿ.

39. ಮಹಿಳಾ ಸಬಲೀಕರಣವನ್ನು ಏಕೆ ಜಾರಿಗೆ ತರಲಾಯಿತು ?

40. ಎರಡನೆ ಮಹಾಯುದ್ಧದ ಸಮಯದಲ್ಲಿ ರೇಡಿಯೋವನ್ನು ಹೇಗೆ ಬಳಸಿಕೊಳ್ಳಲಾಯಿತು ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

41. ಸಾಮಾಜಿಕ ಬದಲಾವಣೆಯ ಲಕ್ಷಣಗಳನ್ನು ಬರೆಯಿರಿ.

42. ಜಾತಿ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಉಂಟುಮಾಡಿದ ಅಂಶಗಳು ಯಾವುವು ?

43. ಭಾರತದಲ್ಲಿ ಪ್ರತಿಭಟನಾತ್ಮಕ ಚಳವಳಿಗಳ ಲಕ್ಷಣಗಳನ್ನು ತಿಳಿಸಿ.

44. ಬ್ರಿಟಿಷರ ಕಾಲದ ಯಾವ ಮಹಿಳಾ ಸಂಘಟನೆಗಳು ಮಹಿಳೆಯರ ಪ್ರಗತಿಗಾಗಿ ಶ್ರಮಿಸಿದವು ?

45. ಕನ್ನಡ ಹಂಪಿ ವಿಶ್ವವಿದ್ಯಾಲಯವು ಬುಡಕಟ್ಟು ಅಭಿವೃದ್ಧಿಗೆ ಹೇಗೆ ಶ್ರಮಿಸುತ್ತಿದೆ ?

46. ಸಮೂಹ ಮಾಧ್ಯಮಗಳ ಪ್ರಾಮುಖ್ಯತೆಯನ್ನು ವಿವರಿಸಿ.

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 1 × 4 = 4**

47. ಪ್ರಾದೇಶಿಕ ಅಸಮತೋಲನವು ಸಾಮಾಜಿಕ ಬದಲಾವಣೆಯನ್ನು ಕುಂಠಿತಗೊಳಿಸುತ್ತದೆ. ವಿವರಿಸಿ.

DO NOT WRITE ANYTHING HERE